# ಸಂಸತ್ತಿನಲ್ಲಿ ಮಹಾ ರಾದ್ಧಾಂತ

## ಲೋಕಸಭೆ ಬಾವಿಗಿಳಿದ ಕಾಂಗ್ರೆಸ್ ಸಂಸದರಿಂದ ಮಾರ್ಷಲ್‌ಗಳ ಜತೆ ಜಟಾಪಟಿ
## ರಕ್ಷಣೆಗಾಗಿ ಬಂದ ಇಬ್ಬರು ಮಹಿಳಾ ಸಂಸದರ ಮೇಲೆ ಮಾರ್ಷಲ್‌ಗಳಿಂದ ಹಲ್ಲೆ?

ಕ.ಪ್ರ 26/11/19

ನವದೆಹಲಿ: ಮಹಾರಾಷ್ಟ್ರದಲ್ಲಿ ಶನಿವಾರ ನಡೆದ ನಾಟಕೀಯ ರಾಜಕೀಯ ಬೆಳವಣಿಗೆಗಳು ಲೋಕಸಭೆಯಲ್ಲಿ ಸೋಮವಾರ ರಾದ್ಧಾಂತಕ್ಕೆ ಕಾರಣವಾಗಿವೆ. ತರಾತುರಿಯಲ್ಲಿ ಬಿಜೆಪಿ ಸರ್ಕಾರ ರಚನೆಗೆ ಅವಕಾಶ ನೀಡಿದ ಕ್ರಮ ಖಂಡಿಸಿ ಬ್ಯಾನರ್ ಹಿಡಿದು, ಸದನದ ಬಾವಿಗೆ ಇಳಿದು ಕಾಂಗ್ರೆಸ್ ಸಂಸದರು ಪ್ರತಿಭಟನೆ ನಡೆಸಿದ್ದಾರೆ. ಈ ವೇಳೆ ಬ್ಯಾನರ್ ಕಸಿಯಲು ಬಂದ ಮಾರ್ಷಲ್‌ಗಳು ಹಾಗೂ ಸಂಸದರ ನಡುವೆ ಜಟಾಪಟಿ ನಡೆದಿದೆ. ಈ ಹಂತದಲ್ಲಿ ತನ್ನ ಇಬ್ಬರು ಮಹಿಳಾ ಸಂಸದರ ಮೇಲೆ ಮಾರ್ಷಲ್‌ಗಳಿಂದ ಹಲ್ಲೆ ನಡೆದಿದೆ ಎಂಬ ಆರೋಪವನ್ನು ಕಾಂಗ್ರೆಸ್ ಮಾಡಿದೆ. ಆದರೆ ಇದನ್ನು ಆಡಳಿತಾರೂಢ ಬಿಜೆಪಿ ಸರ್ಕಾರ ನಿರಾಕರಿಸಿದೆ. ತಮ್ಮ ಸೂಚನೆ ಧಿಕ್ಕರಿಸಿ ಪ್ರತಿಭಟಿಸಿದ್ದೂ ಅಲ್ಲದೆ ಕ್ಷಮೆ ಕೇಳಲು ನಿರಾಕರಿಸಿದ ಇಬ್ಬರು ಸಂಸದರನ್ನು ಸ್ಪೀಕರ್ ಅಮಾನತುಗೊಳಿಸಿದ್ದಾರೆ.

ಕಾಂಗ್ರೆಸ್ ಸಂಸದರ ಗಲಾಟೆ ಹಿನ್ನೆಲೆಯಲ್ಲಿ ಲೋಕಸಭೆಯ ಇಡೀ ದಿನದ ಕಲಾಪ ಬಲಿಯಾಗಿದ್ದರೆ, ರಾಜ್ಯಸಭೆಯಲ್ಲೂ ಇದೇ ಪ್ರಕರಣ ಪ್ರತಿಧ್ವನಿಸಿ ಕಲಾಪವನ್ನು ಮುಂದೂಡಲಾಗಿದೆ. ಈ ಘಟನೆಯ ಬೆನ್ನಲ್ಲೇ ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆ ವಾಕ್ಸಮರ ನಡೆದಿದೆ. ಸಂಸತ್ತಿನ ಒಳಗೆ ಇಂತಹ ಘಟನೆಯನ್ನೂ ಎಂದೂ ನೋಡಿಲ್ಲ, ಜವಾಬ್ದಾರಿಯುತ ವ್ಯಕ್ತಿಗಳ ವಿರುದ್ಧ ಯಾವ ಕ್ರಮ ತೆಗೆದುಕೊಳ್ಳುತ್ತಾರೆ ಎಂದು ಕಾದು ನೋಡುತ್ತಿದ್ದೇವೆ ಎಂದು ಲೋಕಸಭೆಯಲ್ಲಿನ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಹೇಳಿದ್ದಾರೆ. ಸಂಸತ್ತಿನಲ್ಲಿ ಗಲಾಟೆ ನಡೆಸಿದ ಸಂಸದರ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕು ಎಂದು ಕೇಂದ್ರ ಸಚಿವರಾದ ರಾಜನಾಥ ಸಿಂಗ್, ರವಿಶಂಕರ ಪ್ರಸಾದ್ ಹಾಗೂ ಪ್ರಹ್ಲಾದ್ ಜೋಶಿ ಆಗ್ರಹಿಸಿದ್ದಾರೆ. ಸಂಸದರ ಮೇಲೆ ಹಲ್ಲೆಯಾಗಿಲ್ಲ ಎಂದೂ ಹೇಳಿದ್ದಾರೆ.

**ಆಗಿದ್ದೇನು?:** ಮಹಾರಾಷ್ಟ್ರದಲ್ಲಿ ತರಾತುರಿಯಲ್ಲಿ ರಾಷ್ಟ್ರಪತಿ ಆಳ್ವಿಕೆ ಹಿಂಪಡೆದು, ಬಿಜೆಪಿ ಸರ್ಕಾರ ರಚನೆಗೆ ಅನುವು ಮಾಡಿಕೊಡಲಾಗಿದೆ ಎಂದು ದೂರಿದ ಕಾಂಗ್ರೆಸ್ ಸಂಸದರು 'ಪ್ರಜಾಪ್ರಭುತ್ವದ ಕಗ್ಗೊಲೆ' ಎಂಬ ಬ್ಯಾನರ್ ಹಿಡಿದು ಘೋಷಣೆ ಕೂಗುತ್ತಾ ಲೋಕಸಭೆಯ ಬಾವಿಗೆ ಇಳಿದು ಪ್ರತಿಭಟನೆ ಆರಂಭಿಸಿದರು. ಈ ಹಂತದಲ್ಲಿ ಸ್ಪೀಕರ್ ಓಂ ಬಿರ್ಲಾ ಅವರು, ಬ್ಯಾನರ್ ಹಿಡಿದಿದ್ದ ಕೇರಳ ಸಂಸದರಾದ ಟಿ.ಎನ್. ಪ್ರತಾಪನ್ ಹಾಗೂ ಹಿಬಿ ಈಡನ್ ಅವರಿಂದ ಬ್ಯಾನರ್ ಕಸಿಯಲು ಮಾರ್ಷಲ್‌ಗಳಿಗೆ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಸಂಸದರು ಅದಕ್ಕೆ ಅವಕಾಶ ನೀಡಲು ನಿರಾಕರಿಸಿದರು. ಆಗ ಮಾರ್ಷಲ್‌ಗಳ ಜತೆ ಘರ್ಷಣೆಯಾಯಿತು. ಈ ಹಂತದಲ್ಲಿ ತಮಿಳುನಾಡಿನ ಕಾಂಗ್ರೆಸ್ ಸಂಸದೆ ಜ್ಯೋತಿಮಣಿ ಹಾಗೂ ಕೇರಳದ ರಮ್ಯಾ ಹರಿದಾಸ್ ಅವರ ಮೇಲೆ ಮಾರ್ಷಲ್‌ಗಳು ಹಲ್ಲೆ ನಡೆಸಿದ್ದಾರೆ ಎಂದು ಕಾಂಗ್ರೆಸ್ ಆರೋಪಿಸಿತು. ಗದ್ದಲ ಜೋರಾದ ಹಿನ್ನೆಲೆಯಲ್ಲಿ ಲೋಕಸಭೆಯ ಕಲಾಪವನ್ನು ದಿನದ ಮಟ್ಟಿಗೆ ಮುಂದೂಡಲಾಯಿತು. 17ನೇ ಲೋಕಸಭೆಯಲ್ಲಿ ಗದ್ದಲದ ಕಾರಣಕ್ಕೆ ಕಲಾಪವನ್ನು ಮುಂದೂಡಿದ ಮೊದಲ ಪ್ರಕರಣ ಇದಾಯಿತು.



- ಕಾಂಗ್ರೆಸ್‌ನಿಂದ ತೀವ್ರ ಆಕ್ರೋಶ, ಹಲ್ಲೆಯಾಗಿಲ್ಲ ಎಂದು ಕೇಂದ್ರ ಸರ್ಕಾರ ಸ್ಪಷ್ಟನೆ
- ಪ್ರತಿಭಟನೆ ಆರಂಭಿಸಿದ ಕೇರಳದ ಇಬ್ಬರು ಸಂಸದರು ಲೋಕಸಭೆಯಿಂದ ಸಸ್ಪೆಂಡ್

## ಅಜಿತ್ ಅವಧಿಯ 9 ನೀರಾವರಿ ಹಗರಣದ ತನಿಖೆಗೆ ತಿಲಾಂಜಲಿ

ಮುಂಬೈ: ಎನ್‌ಸಿಪಿ ನಾಯಕ ಅಜಿತ್ ಪವಾರ್ ಅವರು ಈ ಹಿಂದೆ ಮಹಾರಾಷ್ಟ್ರದ ಕಾಂಗ್ರೆಸ್-ಎನ್‌ಸಿಪಿ ಸರ್ಕಾರದಲ್ಲಿ ಉಪಮುಖ್ಯಮಂತ್ರಿಯಾಗಿದ್ದಾಗ ನಡೆದಿದ್ದವು ಎನ್ನಲಾದ ನೀರಾವರಿ ಹಗರಣದ 9 ಪ್ರಕರಣಗಳ ತನಿಖೆಯನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಕೈಬಿಟ್ಟಿದೆ. ಮಹಾರಾಷ್ಟ್ರದ ಬಿಜೆಪಿ ನೇತೃತ್ವದ ಸರ್ಕಾರದಲ್ಲಿ ಉಪಮುಖ್ಯಮಂತ್ರಿಯಾಗಿ ಅಜಿತ್ ಪವಾರ್ ಪ್ರಮಾಣವಚನ ಸ್ವೀಕರಿಸಿದ ಎರಡೇ ದಿನಗಳಲ್ಲಿ ಈ ವಿದ್ಯಮಾನ ನಡೆದಿದೆ.



ಮೊದಲು ಇವು ಅಜಿತ್ ಪವಾರ್ ಅವರು ಆರೋಪಿಯಾಗಿದ್ದ ಪ್ರಕರಣಗಳು ಎಂದು ಮಾಧ್ಯಮಗಳಲ್ಲಿ ವರದಿಯಾಗಿ ವಿವಾದಕ್ಕೆ ಕಾರಣವಾಗಿತ್ತು ಹಾಗೂ ಕಾಂಗ್ರೆಸ್ ಕೂಡ ಈ ನಿರ್ಧಾರ ಟೀಕಿಸಿತ್ತು. ಆದರೆ ಇದಕ್ಕೆ ಸ್ಪಷ್ಟನೆ ನೀಡಿರುವ ಎಸಿಬಿ, 'ತನಿಖೆ ನಿಲ್ಲಿಸುತ್ತಿರುವ 9 ಪ್ರಕರಣಗಳಲ್ಲೂ ಅಜಿತ್ ಪವಾರ್ ಆರೋಪಿ ಆಗಿರಲಿಲ್ಲ. 2013ರಲ್ಲಿ ದಾಖಲಾಗಿದ್ದ ನೀರಾವರಿ ಹಗರಣದ ಪ್ರಕರಣಗಳ ತನಿಖೆ ಮುಕ್ತಾಯಗೊಳಿಸುತ್ತಿಲ್ಲ' ಎಂದು ಎಸಿಬಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

**ಕಾಂಗ್ರೆಸ್ ಟೀಕೆ:** ನೀರಾವರಿ ಹಗರಣದ 9 ಪ್ರಕರಣಗಳ ತನಿಖೆ ಮುಕ್ತಾಯ ಪ್ರಶ್ನಿಸಿರುವ ಕಾಂಗ್ರೆಸ್, 'ಬಿಜೆಪಿ-ಅಜಿತ್ ಪವಾರ್ ಸರ್ಕಾರ ಕೈಗೊಂಡಿರುವ ಏಕೈಕ ಸಾರ್ವಜನಿಕ ಹಿತದ ತೀರ್ಮಾನವೆಂದರೆ ಭ್ರಷ್ಟಾಚಾರದ ಎಲ್ಲ ಪ್ರಕರಣಗಳ ತನಿಖೆ ಕೈಬಿಡುವುದು' ಎಂದು ವ್ಯಂಗ್ಯವಾಡಿದೆ.

**ಏನಿದು ಹಗರಣ?:** 2010ರಲ್ಲಿ ಅಜಿತ್ ಪವಾರ್ ಅವರು ಕಾಂಗ್ರೆಸ್-ಎನ್‌ಸಿಪಿ ಮೈತ್ರಿಕೂಟದ ಸರ್ಕಾರದಲ್ಲಿ ಉಪಮುಖ್ಯಮಂತ್ರಿಯಾಗಿದ್ದರು ಹಾಗೂ ನೀರಾವರಿ ಖಾತೆ ಹೊಂದಿದ್ದರು. ಆ ವೇಳೆ ವಿದರ್ಭ ಪ್ರದೇಶದಲ್ಲಿ 13,500 ಕೋಟಿ ರು. ಮೌಲ್ಯದ ನೀರಾವರಿ ಗುತ್ತಿಗೆಗಳನ್ನು ಮನಬಂದ ದರದಲ್ಲಿ ನೀಡಿದ ಆರೋಪವಿದೆ.

## ಕಾರ್ಯಾರಂಭ ಮಾಡಿದ ಸಿಎಂ ಫಡ್ನವೀಸ್



ಮುಂಬೈ: ಹಠಾತ್ತಾಗಿ ನಡೆದ ರಾಜಕೀಯ ಕ್ಷಿಪ್ರ ಕ್ರಾಂತಿಯಿಂದಾಗಿ ಶನಿವಾರ ಮುಂಜಾನೆ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ದೇವೇಂದ್ರ ಫಡ್ನವೀಸ್ ಸೋಮವಾರ ಕಾರ್ಯಾರಂಭ ಮಾಡಿದ್ದಾರೆ. ಮುಖ್ಯಮಂತ್ರಿಗಳ ಪರಿಹಾರ ನಿಧಿ ಚೆಕ್ ಒಂದಕ್ಕೆ ಸಹಿ ಮಾಡಿ, ಮಹಿಳೆಯೊಬ್ಬರಿಗೆ ಸ್ವತಃ ತಾವೇ ನೀಡುವ ಮೂಲಕ ತಮ್ಮ ಕಾರ್ಯ ಆರಂಭಿಸಿದರು ಎಂದು ಸಿಎಂ ಕಚೇರಿ ಟ್ವೀಟ್ ಮಾಡಿದೆ.

5